**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 90/2017 ಸಿ.ಡಬ್ಲ್ಯೂ– ೮ ಪಿ.ಡಬ್ಲ್ಯೂ-೪

| | | |
|---|---|---|
| ಹೆಸರು | ಃ | ಸುರೇಶ @ ಸೂರ್ಯಕಾಂತ |
| ತಂದೆಃ ಗಂಡ | ಃ | ಶ್ರೀಮಂತ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಗುಳ್ಳೊಳ್ಳಿ ತಾಂಡಾ |

ದಿನಾಂಕಃ೨೫.೦೪.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ- 1 ನನ್ನ ತಂದೆ, ಚಾಸಾ-4 ನನ್ನ ಮಾವ, ಚಾಸಾ-5 ನನ್ನ ಸಹೋದರ, ಚಾಸಾ-9 ನನ್ನ ಸಹೋದರನ ಹೆಂಡತಿ, ಚಾಸಾ-11 ನನ್ನ ತಾಯಿ, ಚಾಸಾ-2, 3, 6, 7, 10, 12 ರಿಂದ 15 ರವರ ಪರಿಚಯ ಇರುತ್ತದೆ.

ನನ್ನ ಸಹೋದರ ಶಕಾಪೂರ ಬ್ರಿಡ್ಜ ಮೇಲೆ ನಿಂತಾಗ ಸಿಮೆಂಟ್ ಟ್ಯಾಂಕರ ವಾಹನವನ್ನು ಹಾಯಿಸಿ ಅಪಘಾತಪಡಿಸಿರುತ್ತಾರೆ. ಅಪಘಾತವಾದ ನಂತರ ನನ್ನ ಸಹೋದರನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ, ನಂತರ ಕರೆ ಮಾಡಿದಾಗ ಆಸ್ಪತ್ರೆಗೆ ಬಂದಿರುತ್ತೇವೆ. ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋದರು, ಚಿಕಿತ್ಸೆ ಫಲಕಾರಿಯಾಗದೇ ನನ್ನ ಸಹೋದರ ತೀರಿಕೊಂಡಿರುತ್ತಾನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.೦೬.೦೬.೨೦೧೬ ರಂದು ನನ್ನ ಸಹೋದರ ಎಂದಿನಂತೆ ಪಡಸಾವಳಿ ಗ್ರಾಮಕ್ಕೆ ಕೆಲಸಕ್ಕೆ ಹೋಗಿದ್ದನು ಎಂಧರೆ ಸರಿ. ಘಟನೆ ಕುರಿತು ಚಾಸಾ-೧೩ ಚಾಸಾ-೧ ರವರಿಗೆ ತಿಳಿಸಿದನು ಎಂದರೆ ಸರಿ. ಸದರಿ ಟ್ಯಾಂಕರ್ ವಾಹನದ ಚಾಲಕನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿ ನನ್ನ ಸಹೋದರನು ನಡೆಸಿಕೊಂಡು ಹೋರಟಿದ್ದ ಮೋಟರ್ ಸೈಕಲಗೆ ಅಪಘಾತಪಡಿಸಿದನು ಎಂಧರೆ ಸರಿ. ಅಪಘಾತಪಡಿಸಿದ ವ್ಯಕ್ತಿ ಅಪಘಾತಪಡಿಸಿ ವಾಹನವನ್ನು ತೆಗೆದುಕೊಂಡು ಪರಾರಿ ಆಗಿದ್ದನು ಎಂದರೆ ಸರಿ. ನಾನು ಮತ್ತು ಚಾಸಾ-೧, ಚಾಸಾ-೨ ಘಟನಾ ಸ್ಥಳಕ್ಕೆ ಹೋದೆವು ಎಂದರೆ ಸರಿ. ಚಾಸಾ-೯ ರಿಂದ ೧೧ ರವರು ಘಟನಾ ಸ್ಥಳಕ್ಕೆ ಬಂದರು ಎಂದರೆ ಸರಿ. ಸದರಿ ಘಟನೆಯಿಂದ ನನ್ನ ಸಹೋದರಿನಿಗೆ ತಲೆಗೆ, ಹಣೆಗೆ, ಬಲರಟ್ಟೆಗೆ, ಮುಖಕ್ಕೆ ತೀವ್ರಸ್ವರೂಪದ ಗಾಯಗಳಾಗಿದ್ದವು ಮಾತನಾಡುವ ಸ್ತಿತಿಯಲ್ಲಿರಲಿಲ್ಲ ಎಂದರೆ ಸರಿ. ನಂತರ ಅವನನ್ನು ಆಳಂದ ಆಸ್ಪತ್ರೆಗೆ ಕರೆದುಕೊಂಡು ಬಂದು ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಬಸವೇಶ್ವರ ಆಸ್ಪತ್ರೆ ಕರೆದುಕೊಂಡು ಹೋದೆವು ಮತ್ತು ನಂತರ ಗಂಗಾಮಾಯಿ ಆಸ್ಪತ್ರೆಗೆ

ಕರೆದುಕೊಂಡು ಹೋದೆವು ಎಂದರೆ ಸರಿ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರ ಸಲಹೆ ಮೇರೆಗೆ ಹೈದರಾಬಾದ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯೆ ನನ್ನ ಸಹೋದರ ಮೃತನಾಗಿರುತ್ತಾನೆ ಎಂದರೆ ಸರಿ. ಆರೋಪಿಯ ನಿರ್ಲಕ್ಷತನಿಂದು ಘಟನೆ ನಡೆದಿದೆ ಅವನ ವಿರುದ್ದ ಕಾನೂನು ಕ್ರಮ ಕೈಗೊಳ್ಳಿ ಎಂದು ಹೇಳಿಕೆ ನೀಡಿರುತ್ತೆನೆ ಎಂದರೆ ಸರಿ. ಪೋಲಿಸರು ನನ್ನನ್ನು ಠಾಣೇಗೆ ಕರೆಯಿಸಿ ಇವನೇ ಅಪಘಾತಪಡಿಸಿರುತ್ತಾನೆ ಎಂದು ತೋರಿಸಿದರು ಎಂಧರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎಸ್.ಎನ್. ವಕೀಲರಿಂದ**

ನನಗೆ ಪೋಲಿಸರು ಕರೆ ಮಾಡಿದ ನಂತರ ನಾನು ಆಳಂದಕ್ಕೆ ಆಸ್ಪತ್ರೆಗೆ ಬಂದಿರುತ್ತೆನೆ. ಘಟನಾ ನಡೆದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ನನಗೆ ಯಾವ ನಂಬರನಿಂದ ಕರೆ ಬಂದಿತ್ತು ಆ ನಂಬರ್ ನನಗೆ ಹೇಳಲು ಬರುವುದಿಲ್ಲ. ಮೃತ ನನ್ನ ಸಹೋದರ ರಸ್ತೆ ಕೆಲಸ ಮಾಡುವವರ ಮೇಲೆ ಸುಪರವೈಸರ್ ಕೆಲಸ ಮಾಡುತ್ತಿದ್ದನು. ನಿರಗುಡಿ ಹತ್ತಿರ ರಸ್ತೆ ಕಾಮಗಾರಿ ನಡೆದಿತ್ತು. ನನ್ನ ಸಹೋದರ ಸುಪರವೈಸರ್ ಕೆಲಸ ಮಾಡುತ್ತಿದ್ದನು ಎಂದು ತೋರಿಸಲು ಪೋಲಿಸರಿಗೆ ದಾಖಲಾತಿ ನೀಡಿರುತ್ತೇನೆ. ನಾನು ಇದೇ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿದ್ದೇನೆ ಎಂಧರೆ ಸರಿ ಅಲ್ಲ ಸಾಕ್ಷಿ ಮುಂದುವರೆದು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ತಾರೀಖಿನಿಂದ ನೋಡಿರುತ್ತೇನೆ ಎಂದು ನಿಖರವಅಗಿ ಹೇಳಲು ಬರುವುದಿಲ್ಲ ಘಟನೆ ಆದ ೧೫ ದಿನಗಳ ನಂತರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ, ತಾಯಿ, ಮತ್ತು ನನ್ನ ಮೃತ ಸಹೋದರನ ಹೆಂಡತಿ ಕಲಬುರಗಿ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿ. ನಮಗೆ ಪರಿಹಾರ ಕೂಡ ನ್ಯಾಯಾಲಯ ನೀಡಿರುತ್ತದೆ ಎಂದರೆ ಸರಿ. ಸದರಿ ಘಟನೆಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂಧರೆ ಸರಿ ಅಲ್ಲ. ನನ್ನ ಸಹೋದರನಿಗೆ ಯಾರು ಅಪಘಾತಪಡಿಸಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ಅಪಘಾತ ಪರಿಹಾರವನ್ನು ಪಡೆಯುವುದಕ್ಕೋಸ್ಕರ ಖೊಟ್ಟಿ ಫಿರ್ಯಾದಿಯನ್ನು ಆರೋಪಿಯ ಮೇಲೆ ಸಲ್ಲಿಸಿರುತ್ತೇನೆ ಎಂಧರೆ ಸರಿ ಅಲ್ಲ. ಪೋಲಿಸರು ನನಗೆ ಆರೋಪಿಯನ್ನು ಪೋಲಿಸ್ ಠಾಣೆಯಲ್ಲಿ ತೋರಿಸಿರುತ್ತಾರೆ ಎಂಧರೆ ಸರಿ ಅಲ್ಲ. ನಾನು ನನ್ನ ಹೇಳಿಕೆಯನ್ನು ಎಲ್ಲೂ ಮೊದಲ ಬಾರಿಗೆ ನೀಡಿರುವುದಿಲ್ಲ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ. ಪರಿಹಾರದ ಹಣವನ್ನು ಪಡೆಯುವುದಕ್ಕೆ ಚಾಸಾ-೧ ರವರು ಸುಳ್ಳು ಫಿರ್ಯಾದಿಯನ್ನು ನೀಡಿರುತ್ತಾರೆ ಅದಕ್ಕೆ ಪೂರಕವಾಗಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ